convinced, immediately they should think of re-opening the case in any appropriate court, whether it is in High Court or the Supreme Court depending upon the best legal opinion. Then only the question of punishing arises.

REPRESENTATIONS

Arrest and Release of members.

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೇ, ಮಾನ್ಯ ಸದಸ್ಯರುಗಳನ್ನು ಬಂಧನ ಮಾಡಿದ್ದರ ಬಗ್ಗೆ ತಾವು ಓದಿ ಹೇಳಿದಿರಿ. ಇದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನನ್ನನ್ನು ನನ್ನ ಮನೆಯಲ್ಲಿ ಬಂಧನ ಮಾಡಿದರು ? ಎಲ್ಲಿಗೆ ಕರೆದುಕೊಂಡು ಹೋದರು ? ಯಾವ ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಮಾಡಿದರು ? ಯಾವುದು ನಮಗೆ ಗೊತ್ತಿಲ್ಲ. ಬಸ್ಸುಗಳಲ್ಲಿ ಲಾರಿಗಳಲ್ಲಿ ತುಂಬಿಕೊಂಡು ಹೋದರು ; ನಮಗೆ ಕುಡಿಯುವುದಕ್ಕೆ ನೀರು ಕೊಡಲಿಲ್ಲ ; ಊಟ ಇರಲಿಲ್ಲ ; ಸಾಯಂಕಾಲ ಕಬ್ಬನ್ ಪಾರ್ಕಿಗೆ ಕರೆದುಕೊಂಡು ಬಂದರು, ನಮ್ಮನ್ನು ಯಾವ ಸೆಕ್ಷನ್ ಪ್ರಕಾರ ಬಂಧನ ಮಾಡಿದರು ? ನಮಗೆ ಯಾರು ಬೆಯಿಲ್ ಕೊಟ್ಟರು ? ನಾವು ಸೆಲ್ಫ್ ಬೆಯಿಲ್ ಕೂಡ ಕೊಟ್ಟಿಲ್ಲ. ನಾವು ಬೇರೆಯವರಿಗೆ ಬೆಯಿಲ್ ಕೊಡುವುದಕ್ಕೆ ಅಧಿಕಾರ ಕೊಟ್ಟಿಲ್ಲ. ನಮ್ಮನ್ನು ಮೂರು ಗಂಟೆಗೆ ತೆಗೆದುಕೊಂಡು ಹೋಗಿ ರಾತ್ರಿ ೯ ಗಂಟೆಯವರೆಗೆ ಪೆರವಣಿಗೆ ಮಾಡಿಸಿದರಲ್ಲ ; ಇದರ ಅರ್ಥ ಏನು ? ನಮ್ಮಂಥ ಶಾಸಕರನ್ನೇ ; ಹೀಗೆ ಮಾಡಿದರೆ ; ಇನ್ನು ಸಾಮಾನ್ಯ ರೈತರ ಗತಿ ಏನು ?

ಅಧ್ಯಕ್ಷರು.—ನನಗೆ ಬಂದಿರತಕ್ಕದ್ದನ್ನು ನಾನು ಓದಿ ಬಿಡುತ್ತೇನೆ. ಒಂದು ವೇಳೆ ವ್ಯತ್ಯಾಸ ಇದ್ದರೆ ವಿಚಾರ ಮಾಡೋಣ.

11-30 A.M.

SRI AZEED SAIT.—Sir, Sri Made Gowda was also arrested.

MR. SPEAKER.—ನನ್ನ ಹತ್ತಿರ ಯಾವುದು ಇದೆ ಅದನ್ನು ಹೇಳುತ್ತೇನೆ.

"Office of the Circle Inspector of Police, Cubbon Park Sub Division, Bangalore, Dated 6th February 1981. To : The Speaker, Karnataka Legislative Assembly, Vidhana Soudha, Bangalore.

Sub : Arrest of 15 Members of the Legislative Assembly in front of Vidhana Soudha on 6th February 1981.

Today (6th February 1981) at about 2 p.m. over 600 persons who had come to participate in the 'Kissan Jatha' on 5th February 1981 came towards Vidhana Soudha in groups from various parts of the City. They were in groups of more than five each. They were led by some Legislators On seeing these people, I informed them that prohibitory orders U/S 35 K.P. Act were in force throughout the city and the Assembly of more than four persons was not allowed. I also advised them to go away from the place but the people who had gathered there and their leaders who also included some legislators did not head to my advice. Instead they rushed towards the western gate of Vidhana

Soudha. They were stopped by the Police in front of Western Gate of Vidhana Soudha in and around the portico. Then they all squatted under the portico, and on the passage shouting slogans against the Government. They were also blowing some musical pipes loudly. I once again warned them to disperse as they were violating the prohibitory orders. They did not heed to my advice. I told them that they were all underest and asked to get into the police van and buses which they willingly did.

I connection with the above a complaint in Vidhaua Soudha Police Station in Crime No. 17/81 U/S 151 Cr. P.C. U/S 108 K.P. Act was registered. In all 606 persons were arrested and out of them there are 15 members of the Legislative Assembly whose names are enclosed separately. The 15 Members of the Legislative Assembly who were arrested along with others were later released on bail at 9 p.m. On the orders of the Metropolition Magistrate, Traffic, Mvyohall, Bangalore. None on Legislators wanted to go inside the Vidhana Soudha but wanted to be removed with the others who had come with them."

I have read the names, This is the information. I do not have further information.

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೇ, ನಮ್ಮ ಬೇಲ್ ತೆಗೆದುಕೊಳ್ಳಲಿಲ್ಲ. ಸುಮ್ಮನೆ ಮೆರವಣಿಗ ಮಾಡಿ ಬಿಟ್ಟುಬಿಟ್ಟರು.

MR. SPEAKER.— This is all the information I have got.

ಶ್ರೀ ಕೆ. ಬಿ. ಶಿವಯ್ಯ.— ಅಧ್ಯಕ್ಷರೇ, ನಾವು ಯಾರೂ ಬೇಲ್ ಕೊಟ್ಟಿಲ್ಲ. They were arrested and released. That is correct, but were released not on bail.

SRI AZIZ SAIT.— We were not taken before the Magistrate. And we never came in batches of five. We came in a batch of 1,000 people towards the Western gate, ಅಧ್ಯಕ್ಷರೇ, ೬೦೬ ಜನರ ಲಿಸ್ಟ್ ಮಾಡಿದ್ದಾರೆ. ನಾವು ಬಂದದ್ದು ಒಂದು ಸಾವಿರ ಜನರು. ಒಂದುಸಾವಿರ ಜನ ಪಿಜೀಸ್ ಆಫೀಸಿನಿಂದ ನೇರವಾಗಿ ಬಂದೆವು. ಡೇ ಲೈಟ್‌ನಲ್ಲಿ ನಡೆದ ವಿಚಾರದ ಬಗ್ಗೆ ಸತ್ಯಕ್ಕೆ ದೂರವಾದ ಇನ್‌ಫರ್‌ಮೇಷನ್ ತಪ್ಪಗೆ ಕೊಡುತ್ತಿದ್ದಾರೆ. ಆ ಬಗ್ಗೆ, ನಾನು ಏನು ಹೇಳಲಿಕ್ಕೂ ಬಾಯಿಯಲ್ಲಿ ವರ್ಡ್ಸ್ ಬರುತ್ತಾ ಇಲ್ಲ. We came to Vidhana Soudha, we squatted in the Portico. A batch of 12 persons were sitting just at the entrance of the Assembly. ಯಾವ ರಿಲೀಸ್ ಬೇಲ್ ಕೊಟ್ಟಿಲ್ಲ. ನಾವು ಯಾರೂ ಸೈನ್ ಮಾಡಿಲ್ಲ. ನಮ್ಮನ್ನು ಕರೆದುಕೊಂಡು ಹೋಗಿದ್ದು ಯಲಹಂಕಕ್ಕೆ, ಆನಂತರ ಕಬ್ಬನ್‌ಪಾರ್ಕ್‌ಗೆ ಕರೆದುಕೊಂಡು ಬಂದರು. ಸೋಮಪ್ಪ ಎಸ್.ಪಿ. ನಮ್ಮ ಜೊತೆಯಲ್ಲಿದ್ದರು.

ಅಧ್ಯಕ್ಷರು.— ಅದು ಎಲ್ಲಾ ಇಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಾವು ವಿಧಾನಸೌಧದ ಬಳಿ ಬಂದದ್ದು ನಿಜ. ಇದ್ದಂಥ ಆಜ್ಞೆಗಳು ಉಲ್ಲಂಘನೆಯಾಗಿರಬೇಕು. ಸರ್ಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ಅಭ್ಯಂತರವಿಲ್ಲ. ಕ್ರಮ ತೆಗೆದುಕೊಳ್ಳುವ

ದಕ್ಕೂ ಒಂದು ಕ್ರಮ ಉಂಟು. ನಮ್ಮನ್ನು ಬರೀ ಬಸ್ಸು, ವ್ಯಾನುಗಳಲ್ಲೇ ಅಲ್ಲ, ಲಾರಿಯ ಮೇಲೆ ತೆಗೆದು ಕೊಂಡು ಹೋದರು. ಲಾರಿ ಮೇಲೆ ಜನ ತೆಗೆದುಕೊಂಡು ಹೋಗಬಾರದು ಎಂದು ಕೇಳಿದ್ದೇನೆ. ಲಾರಿ ಮೇಲೆ ಎಲ್ಲಿಗೆ ತೆಗೆದುಕೊಂಡು ಹೋದರು ಎಂದರೆ, ಇಲ್ಲಿಂದ ತೆಗೆದುಕೊಂಡು ಹೋಗಿ ಅಲ್ಲಿಂದ ರಿಲೀಸ್ ಮಾಡಿದ್ದಾರೆಂದು ಹೇಳಬಹುದು. ಒಂದು ಸ್ವಲ್ಪ ಜನ ನೆಲಮಂಗಲದ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದರು, ಇನ್ನು ಸ್ವಲ್ಪ ಜನರನ್ನು ಯಲಹಂಕದ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದರು. ನಮ್ಮನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಾ ಎಂದರೆ ಉತ್ತರವಿಲ್ಲ. ಲಕ್ಸುರಿ ಡಿಲಕ್ಸ್ ಲಾರಿಯಲ್ಲಿ ಬೆಂಗಳೂರು ದರ್ಶನ, ಆನಂತರ ಕಬ್ಬನ್‌ಪಾರ್ಕ್‌ಗೆ ೬ ಗಂಟೆಗೆ ತೆಗೆದುಕೊಂಡು ಬಂದು ಬಿಟ್ಟರು. ನಮಗೆ ಊಟ ಇಲ್ಲ, ಏನೂ ಇಲ್ಲ. ಇಲ್ಲಿಂದ ನಮ್ಮನ್ನು ತೆಗೆದುಕೊಂಡು ಹೋಗಿ ಅಲ್ಲಿ ಬಿಟ್ಟುಬಿಟ್ಟಿದ್ದರೆ ನಮ್ಮ ಪಾಡಿಗೆ ನಾವು ಹೋಗುತ್ತಿದ್ದೆವು. ನಮ್ಮನ್ನು ಅರೆಸ್ಟ್ ಮಾಡಿದ್ದೀರಾ ಎಂದು ಆಫೀಸರ್ ಕೇಳಿದರೆ ಗೊತ್ತಿಲ್ಲ ಎಂದೂ ಹೇಳುತ್ತಿದ್ದರು. ರಾತ್ರಿ ೧೦–೩೦ಕ್ಕೆ ಎರಡು ಮೂರು ಸಾರಿ ಕಬ್ಬನ್‌ಪಾರ್ಕ್ ಪೋಲೀಸ್ ಸ್ಟೇಷನ್‌ನಲ್ಲಿ, ತುಂಬಾ ಗಲಾಟೆ ಮಾಡಿದ ಮೇಲೆ ನಿಮ್ಮನ್ನು ನಾವು ಬಿಡುಗಡೆ ಮಾಡುವ ತೀರ್ಮಾನ ಮಾಡಿದ್ದೇವೆಂದು ಹೇಳಿದರು. ಕಬ್ಬನ್‌ಪಾರ್ಕ್‌ನಲ್ಲಿ ನಿಮ್ಮನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಲಿಲ್ಲ, ನೀವು ಎಲ್ಲಿಗೂ ಹೋಗಬೇಡಿ ಎಂದು ಹೇಳುತ್ತಿದ್ದರು. ಅಸೆಂಬ್ಲಿ ಸದಸ್ಯರು, ಕೌನ್ಸಿಲ್ ಸದಸ್ಯರು ಇದ್ದಾಗಲೇ ಈ ಪರಿಸ್ಥಿತಿ ಆದರೆ ಬೇರೆ ಜನ ಪೋಲೀಸರ ಕೈಯಲ್ಲಿ ಸಿಕ್ಕಿಕೊಂಡರೆ ಹೇಗೆ? ನೆನ್ನೆಯ ದಿವಸ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅಡ್ಡಿ ಇರಲಿಲ್ಲ. But harassing legislators is not correct ಅದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಸರ್ಕಾರ ಇಂತಹ ಸಂದರ್ಭದಲ್ಲಿ ಇನ್ನುಮುಂದಾದರೂ ಪ್ರೊಟೆಕ್ಷನ್ ಕೊಡಬೇಕು. ಸರ್ಕಾರ ಕಾನೂನು ಪ್ರಕಾರ ವ್ಯವಹಾರ ಮಾಡಿಲ್ಲ, ಸುಮ್ಮನೆ ನೆಲಮಂಗಲ, ಕಬ್ಬನ್‌ಪಾರ್ಕ್‌ನಲ್ಲಿ ಕೂರಿಸುವುದು ಸರಿಯಾದ ಕ್ರಮ ಅಲ್ಲ ಎಂದು ಪ್ರತಿಭಟನಾ ಪೂರ್ವಕವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಅಧ್ಯಕ್ಷರೆ, ರಿಪ್ರಿಕ್ಟ್ ಆರ್ಡರ್ ಏನಿತ್ತು ಆದು ಸತ್ಯ. ನಾವು ಇಲ್ಲಿ ಬಂದು ಕುಳಿತಿದ್ದೇವೆ. ನಮ್ಮನ್ನು ಅರೆಸ್ಟ್ ಮಾಡಿದ ಮೇಲೆ ನಮ್ಮನ್ನು ಇಲ್ಲಿಯ ಜುರಿಸ್‌ಡಿಕ್ಷನ್ ಬಳಿ ಕೊಂಡೊಯ್ಯಬೇಕಾಗಿತ್ತು. ಕಾನೂನಿಗೆ ವಿರೋಧವಾಗಿ, ಕ್ರಿಮಿನಲ್ ಪ್ರೊಸೀಜರ್‌ಗೆ ವಿರೋಧವಾಗಿ ಕೆಲವರನ್ನು ನಾಲ್ಕೈದು ಬಸ್ಸುಗಳಲ್ಲಿ ಯಲಹಂಕಕ್ಕೆ ಮತ್ತು ನೆಲಮಂಗಲಕ್ಕೆ ಕೊಂಡೊಯ್ದರು, ಇದು ನ್ಯಾಯಬಾಹಿರವಾದುದು. ನಮ್ಮ ಜುರಿಸ್‌ಡಿಕ್ಷನ್ ಆಫ್ ದಿ ಕೋರ್ಟ್ ಏನಿದೆ,[ಈ ಜುರಿಸೆಡಿಕ್ಷನ್ ಹೊರಗೆ ಕೊಂಡೊಯ್ಯುವ ಸಂಚು ಏನು ಮಾಡಿದ್ದಾರೆ ಇದು ನಮ್ಮ ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್‌ಗೆ ವಿರೋಧವಾಗಿದೆ. ಕ್ರಿಮಿನಲ್ ಪ್ರೊಸೀಜರ್ ೬೦ರಲ್ಲಿ ಏನು ಹೇಳುತ್ತದೆ ಎಂದರೆ..... The police

> Officer making an arrest without warrant shall without unnecessary delay and subject to the provisions herein contained as to bail, take or send the person arrested before a Magistrate having jurisdiction in the case or before the Officer incharge of the Police Station". ಇಂತಹ ಒಂದು

ಪ್ರಾವಿಜನ್ ಕಟ್ಟುನಿಟ್ಟಾಗಿ ಇರುವಾಗ ನಮ್ಮನ್ನು ಮಧ್ಯಾಹ್ನ ೧ ಗಂಟೆಗೆ ಅರೆಸ್ಟ್ ಮಾಡಿ ರಾತ್ರಿ ೯ ಗಂಟೆಯವರೆಗೂ ಅನ್ನ, ನೀರು ಕೊಡದೆ, ನಮ್ಮ ಜನಗಳನ್ನು ಎಲ್ಲಿ ಕಡೆ ಪೆರೇಡ್ ಮಾಡಿಸಿ, ಈ ಜುರಿಸ್‌ಡಿಕ್ಷನ್ ನಿಂದ ಹೊರಗೆ ಕೊಂಡೊಯ್ದು, ಎಷ್ಟು ಡಿಲೇ ಮಾಡಬೇಕು ಅಷ್ಟು ಡಿಲೇ ಮಾಡಿ ಕಡೆಗೆ ನಮ್ಮನ್ನು ಬಿಟ್ಟಿದ್ದಾರೆ. ಬೆಳಿಗ್ಗೆ ನೋಡಿದರೆ ಬೇಲ್ ಮುಖಾಂತರ ಬಿಟ್ಟಿದ್ದೇವೆ ಎಂದು ಪತ್ರಿಕೆಯಲ್ಲಿ ಓದುತ್ತಿದ್ದೇವೆ. ನಾವು ಯಾವ ಬೇಲ್ ಕೊಟ್ಟಿಲ್ಲ. ಬೇಲ್ ಕೊಡುವ ಅವಶ್ಯಕತೆಯೂ ಇಲ್ಲ. ಬೇಲ್ ಕೊಡುವುದು ಇರಲಿ, ಇವರು ಯಾವರೀತಿ ಬಿಡುಗಡೆ ಮಾಡಿದರು. ಯಾವ ಕಾನೂನು ಪ್ರಕಾರ ಮ್ಯಾಜಿಸ್ಟ್ರೇಟ್ ಹತ್ತಿರ ಪ್ರೊಡ್ಯೂಸ್ ಮಾಡಲಿಲ್ಲ. ನಮ್ಮನ್ನು ಬಿಟ್ಟಿದ್ದೇವೆ ಎಂದು ಯಾವರೀತಿ ಹೇಳಿಕೆ ಕೊಟ್ಟಿದ್ದಾರೆ, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.ತಾವು ಇದನ್ನು ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಜಿ. ಕೊಡಗಿ.— ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡು ಪ್ರಶ್ನೆಗಳಿವೆ. ಒಂದು, ಶಾಸಕರನ್ನು ಬಂಧಿಸಿದ್ದು, ಎರಡನೆಯದು, ರೈತರನ್ನು.....

ಅಧ್ಯಕ್ಷರು.— ಶ್ರೀ ಶ್ರೀನಿವಾಸ್ ಅವರು ಈ ಎಲ್ಲ ವಿಚಾರವನ್ನೂ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎ. ಜಿ. ಕೊಡಗಿ.— ನಾನು ರೈತರ ಗೋಳಿನ ಕಥೆಯನ್ನು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ನಮ್ಮನ್ನು ಯಾವ ರೀತಿ ಸರ್ಕಾರದವರು ನಡೆಸಿಕೊಂಡಿದ್ದಾರೆನ್ನುವುದನ್ನು. ಕಾನೂನು ಮತ್ತು ಶಿಸ್ತುಪಾಲನೆ ಈ ರಾಜ್ಯದಲ್ಲಿದೆಯೆ? ಕಾನೂನಿಗೆ ವಿರುದ್ಧವಾಗಿ ನಮ್ಮನ್ನು ಬೇರೆ ಬೇರೆ ಪ್ರದೇಶಗಳಿಗೆ ಕೊಂಡೊಯ್ದು ರಾತ್ರಿ ಒಂಬತ್ತು ಗಂಟೆ ಮೇಲೆ ನಮ್ಮನ್ನು ಬಿಟ್ಟಿರಬೇಕಾದರೆ ಇನ್ನು ಸಾಮಾನ್ಯ ಜನರ ಗತಿ ಏನು? ತಾವು ನಮಗೆ ರಕ್ಷಣೆ ಕೊಡಬೇಕಾಗುತ್ತದೆ. ಬೇರೆಯವರಿಗೆ ಬೇರೆ ರೀತಿ ರಕ್ಷಣೆ ನೀಡುವ ಸಂದರ್ಭ ಬರುತ್ತದೆ. ಆದರೆ, ನಮಗೆ ತಾವು ರಕ್ಷಣೆ ಕೊಡಬೇಕಾಗುತ್ತದೆ, ಆ ಹೊಣೆಗಾರಿಕೆ ತಮಗೆ ಇದೆ. ಆದಕ್ಕೋಸ್ಕರ ನಾನಿದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು.— ನಾನಿದನ್ನು ವಿಚಾರಿಸುತ್ತೇನೆ. ನನಗೆ ಬಂದಿರುವ ವರದಿಯನ್ನು ಸಭೆಯ ಗಮನಕ್ಕೆ ತಂದಿದ್ದೇನೆ.

ಶ್ರೀ ಎ.ಜಿ ಕೊಡಗಿ.—ತಮ್ಮ ಬಗ್ಗೆ ನಮಗೆ ಗೌರವವಿದೆ. ಆದರೆ, ಸರ್ಕಾರದವರು ತಮಗೆ ನೀಡಿದ ವರದಿಗಿಂತಲೂ ಬೇರೆ ರೀತಿಯ ವರ್ತನೆ ನಡೆದಿದೆ. ವರದಿಯಲ್ಲಿರುವುದು ಸತ್ಯಕ್ಕೆ ದೂರವಾದ ವಿಚಾರವೆನ್ನುವುದನ್ನು ತಮ್ಮ ಗಮನಕ್ಕೆ ತರುವ ಅವಶ್ಯಕತೆ ಇದೆ, ತಂದಿದ್ದೇನೆ.

SRI AZEEZ SAIT — It is the bounden duty and responsibility of the police to inform the Chairman or the Speaker regarding the arrest of the legislators.

MR. SPEAKER.— They have done that.

ಶ್ರೀ ಡಿ. ದೇವರಾಜ ಅರಸ್.— ಶಾಸಕರನ್ನು ಬಂಧಿಸಿದ ವೇಳೆಗೂ ಮತ್ತು ತಮಗೆ ವರದಿ ಬಂದ ವೇಳೆಗೂ ಬಹಳ ಸಮಯದ ಅಂತರವಿದೆ. ಶಾಸಕರನ್ನು ಬಂಧಿಸಿದ ತಕ್ಷಣ ಇಂತಿಂಥ ಶಾಸಕರನ್ನು ಬಂಧಿಸಲಾಗಿದೆ ಎಂದು ತಮಗೆ ಬರೆಯಬೇಕಿತ್ತಲ್ಲವೆ? ಶಾಸಕರನ್ನು ಬಂಧಿಸಿರುವುದು ಸರಿಯೋ ಅಥವಾ ತಪ್ಪೋ ಎಂದು ಹೇಳುವುದಿಲ್ಲ. ಆದರೆ, ಶಾಸಕರನ್ನು ಬಂಧಿಸಿದ ಸುದ್ದಿ ತಮಗೆ ತಕ್ಷಣ ಕಳುಹಿಸಬೇಕಲ್ಲವೆ?

ಅಧ್ಯಕ್ಷರು.— ನಿನ್ನೆ ಸದನ ಏಳುವವರೆಗೆ ಏನಾದರೂ ಸುದ್ದಿ ಬಂದಿದೆಯೆ ಎಂದು ನಾನು ವಿಚಾರಿಸಿದೆ, ಬಂದಿರಲಿಲ್ಲ. ನಂತರ ೧೨ ಗಂಟೆಗೆ ಬಂತು. ಇದರ ಜೊತೆಗೆ ತಾವು ಈಗ ಪ್ರಸ್ತಾಪ ಮಾಡಿದ್ದೀರಿ. ಅದನ್ನು ವಿಚಾರಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ನಾನು ತಮ್ಮ ಗಮನಕ್ಕೆ ಎರಡು ವಿಚಾರಗಳನ್ನು ತರುತ್ತೇನೆ. ತಾವು ವಿಚಾರ ಮಾಡುವಾಗ ಸರ್ಕಾರದಿಂದ ಇವುಗಳಿಗೂ ಮಾಹಿತಿ ತರಿಸಿಕೊಡಿ. ವಿಧಾನಸೌಧದ ಮೆಟ್ಟಿಲುಗಳು ಲೆಜಿಸ್ಲೇಚರ್ ಪ್ರಿವಿಸೆಸ್ ಆಗುವುದಿಲ್ಲವೆ?

ಅಧ್ಯಕ್ಷರು.— ನೋಟಿಫೈ ಮಾಡು.....

ಶ್ರೀ ಡಿ. ದೇವರಾಜ ಅರಸ್.— ನೋಟಿಫೈ ಮಾಡಿದ್ದಾರೋ ಇಲ್ಲವೋ? As it is, legislators home itself is within the permises ಎಂದು ಹೇಳಿರುವುದು ನನಗೆ ಚೆನ್ನಾಗಿ ಜ್ಞಾಪಕವಿದೆ.

MR. SPEAKER.— Facts are there.

SRI D. DEVARAJ URS.— Facts are there with reference to the arrest and release.

MR. SPEAKER.— The House and lounge comes within the precincts of the legislature.

SRI D. DEVARAJ URS.— Whether the portico is within the jurisdiction of the legislature or not ಎನ್ನುವುದು ಒಂದು ಪ್ರಶ್ನೆ. ಇದು ತೀರ್ಮಾನವಾಗಲಿ. ಪೋರ್ಟಿಕೋ ಇದಕ್ಕೆ ಸೇರುವುದಿಲ್ಲವೆಂದರೆ ಅದನ್ನು ತಮ್ಮ ಅಭಿಪ್ರಾಯಕ್ಕೆ ಬಿಡುತ್ತೇನೆ. ನಮ್ಮದೇನಿಲ್ಲ.

MR. SPEAKER.— "...precincts of the Assembly means and includes the chamber, the lobbies, the galleries and to such other places as the Speaker may, from time to time specify."

SRI D. DEVARAJ URS.— If that has been specified, whether it has been revoked. ನಿಮ್ಮ ಹಿಂದಿನವರು ಯಾವಾಗಲಾದರೂ ರಿವೋಕ್ ಮಾಡಿದ್ದಾರಾ? ನನಗೆ ಜ್ಞಾಪಕ ವಿದ್ದ ಹಾಗೆ ವಿಧಾನಸೌಧದ ಪಕ್ಕದಲ್ಲಿರುವ ಶಾಸಕರ ಭವನವೂ ಕೂಡ ಲೆಜಿಸ್ಲೇಚರ್ ಪ್ರೆಸಿಂಕ್ಟ್‌ನಲ್ಲಿ ಬರುತ್ತದೆ.

ಅಧ್ಯಕ್ಷರು.— ಅದನ್ನು ನಾನು ವೆರಿಫೈ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಅದು ರೂಲ್ ಪ್ರಕಾರ ಆಗಿದ್ದರೆ ಮತ್ತು ನೋಟಿಫೈ ಮಾಡಿದ್ದರೆ then the whole arrests becomes within the precincts, Wheter the portico is within the precincts or not, depends on the previous notification. This is my point. Another point is, having arrested–I think the House was sitting–they could have informed the Chairman or the Speaker.

MR. SPEAKER.— Next item, presentation of petitions.

SRI AZEEZ SAIT.—Sir, Hon. Member Sri Madaiah was arrested along with us. Here there is no mention about his arrest. The Police Commissioner should have informed you.

MR. SPEAKER.—What I have received, I have placed before the House. I am not supposed to ask him whether he has arrested him or not arrested him. Next item, presentation of petitions.

PRESENTATION OF PETITIONS

SRI N.B. SIRDESAI.—Sir I present

i) Petition signed by Sri B. S. Soman and others regarding relief under the Land Reforms Act, Karnataka State to the serving and retired personnel of the Indian Army, Navy and Air Force.

ii) Petition signed by Sri Raja Somnathji Guru Mahant and others regarding enquiry into the death of Sadhu Raj Guru of Vittal Mutt in Mangalore Taluk and handing over the possession of the Estate to newly elected Sadhu.

MR. SPEAKER.—Petitions presented.

SRI K. RAMABHAT.—I present.

(i) ಮನೆ ಬಾಡಿಗೆ ಭತ್ಯ ಇತ್ಯಾದಿಗಳ ಬಗ್ಗೆ ಪುತ್ತೂರ್ ತಾಲ್ಲೂಕಿನ ಸಹಾಯ ಪೋಷಿತ ಪ್ರೌಢ ಶಾಲಾ ಅಧ್ಯಾಪಕರು ಸಹಿ ಮಾಡಿದ ಅರ್ಜಿಯನ್ನೊಪ್ಪಿಸುವೆನು.

(ii) ಪ್ರವಾಸ ಭತ್ಯ ಹಾಗೂ ಇತರ ವೆಚ್ಚ ಇತ್ಯಾದಿಗಳನ್ನು ಮಂಜೂರ್ ಮಾಡುವ ಬಗ್ಗೆ ಪುತ್ತೂರ್ ತಾಲ್ಲೂಕಿನ ಗ್ರಾಮ ಸಹಾಯಕರು ಸಹಿ ಮಾಡಿದ ಅರ್ಜಿಯೊಂದನ್ನು ಒಪ್ಪಿಸುವೆನು.